

ರೂಪಾ ಇಂಥವೊಂದು ಅನಿರೀಕ್ಷಿತ ಪ್ರಶ್ನೆಯನ್ನು ನಿರೀಕ್ಷಿಸದೇ ಇದ್ದವಳು ಏಕದಂ ಕಕ್ಕಾವಿಕ್ಕಿಯಾದಳು. ಮತ್ತು ತಲೆಮೇಲೆ ಸೆರಗು ಹಾಕಿ ಸಾವರಿಸಿಕೊಂಡಳು. ಅವಳೂ ಏನೂ ಕಮ್ಮಿಯಲ್ಲ! ಅವನಷ್ಟೇ ತೀಕ್ಷ್ಣಮತಿಯವಳು. ಬಸೂನ ಹುಡುಕಾಟದಲ್ಲಿ ಇದ್ದಳೇನೋ? ಆತನನ್ನು ಗುರುತಿಸುವ ಚುರುಕು ಕಂಗಳಿಂದ ಕೇಳಿದಳು, ‘ನೀವು ಬಸೂ ಮಾಮಾ ಹೌಂದಲ್ಲ...!?’

‘ಹೂಂ’ ಎಂದು ಗೋಣು ಆಡಿಸಿದ.

‘ಎಷ್ಟು ತೆಳ್ಳಗಾಗೇರಿ ಅಂತೀನಿ... ಮಾಮಿ ಊಟಾ ಹಾಕ್ತಾರೋ ಇಲ್ಲೋ...’ ನಗುತ್ತ ತನ್ನ ಹಳೆಯ ಚಾಷ್ಟಿಯ ಚಾಳಿಗೆ ಇಳಿದಳು. ಆಕೆ ಆತನ ಬಗೆಗೆ ತಿಳಿದವಳು.